# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

## C.C.No.576/2025

| | | |
|---|---|---|
| ಹೆಸರುಃ | ರಘು | CW-2 |
| ತಂದೆ/ಗಂಡ ಹೆಸರುಃ | ಲಿಂಗೇಗೌಡ | PW-1 |
| ವಯಸ್ಸು | 38 ವರ್ಷ | |
| ವೃತ್ತಿ | ಪೇದೆ, ಸಕಲೇಶಪುರ ಗ್ರಾಮಾಂತರ ಠಾಣೆ | |
| ವಿಳಾಸಃ | ಸಕಲೇಶಪುರ | ದಿನಾಂಕಃ 03-02-2026 |

**ಮುಖ್ಯ ವಿಚಾರಣೆಃ** ಮಾನ್ಯ **ಎ ಪಿ ಪಿ ಯವರಿಂದ**

2022 ರಿಂದ ಇಲ್ಲಿಯವರೆಗೆ ನಾನು ಸಕಲೇಶಪುರ ಗ್ರಾಮಾಂತರ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 07.04.2025 ರಂದು ಮ 12.45 ಕ್ಕೆ ಚಾಸಾ 1 ರವರಿಗೆ ಬಂದ ಬಾತ್ಮಿ ಮೇರೆಗೆ, ಮಧ್ಯಾಹ್ನ 2 ಗಂಟೆಗೆ ನನ್ನನ್ನು ಮತ್ತು ಚಾಸಾ 3 ರವರೊಂದಿಗೆ ಇಲಾಖಾ ಜೀಪ್ ನಲ್ಲಿ ಸಕಲೇಶಪುರ ತಾಲ್ಲೂಕು ಜಮ್ಮನಹಳ್ಳಿ ಗ್ರಾಮಕ್ಕೆ ತೆರಳಿ, ಅಲ್ಲಿ ಚಾಸಾ 4 ಮತ್ತು 5 ಪಂಚರನ್ನು ಕರೆದುಕೊಂಡು ಜಮ್ಮನಹಳ್ಳಿ ಗ್ರಾಮದ ಗುರುವಪ್ಪ ರವರ ಮನೆಯ ಮುಂಭಾಗ ಮ 2.15ಕ್ಕೆ ಹೋಗಿರುತ್ತೇನೆ. ಅವರ ಚಿಲ್ಲರೆ ಅಂಗಡಿಯ ಮುಂಭಾಗ ಶೀಟ್ ಗಳ ಕೆಳಗೆ ಮಧ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದರು. ಮ 2.30 ರಿಂದ 3.30 ರ ವರೆಗೆ ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿ ಚಾಸಾ 1 ರವರು 650 ಎಂ ಎಲ್ ನ 5 ರಾಯಲ್ ಚಾಲೆಜರ್ಸ್ ಬಿಯರ್, 90 ಎಂ ಎಲ್ ನ 32 ಒರಿಜಿನಲ್ ಚಾಯ್ಸ ಡಿಲೇಕ್ಸ ವಿಸ್ಕಿ, 90 ಎಂ ಎಲ್ ನ 6 ಓಲ್ಡ್ ಟವರಿಲ್ ವಿಸ್ಕಿ, 90 ಎಂ ಎಲ್ ನ 6 ಓಲ್ಡ್ ಅಡ್ಮಿರಲ್ ವಿಸ್ಕಿ ಮತ್ತು 180 ಎಂ ಎಲ್ ನ 4 ಬ್ಯಾಗ್ ಪೈಪರ್ ವಿಸ್ಕಿ ಗಳನ್ನು ಅಮಾನತ್ತು ಪಡಿಸಿಕೊಂಡಿರು. ವಶಪಡಿಸಿಕೊಂಡ ಎಲ್ಲ ಮಧ್ಯದ ಪೈಕಿ 650 ಎಂ ಎಲ್ ನ 2 ರಾಯಲ್ ಚಲೆಜರ್ಸ್ ಬಿಯರ್, 90 ಎಂ ಎಲ್ ನ 10 ಒರಿಜಿನಲ್ ಚಾಯ್ಸ ಡಿಲೇಕ್ಸ ವಿಸ್ಕಿ, 90 ಎಂ ಎಲ್ ನ 4 ಓಲ್ಡ ಟವರಿಲ್ ವಿಸ್ಕಿ, 90 ಎಂ ಎಲ್ ನ 2 ಓಲ್ಡ್ ಅಡ್ಮಿರಲ್ ವಿಸ್ಕಿ ಮತ್ತು 180 ಎಂ ಎಲ್ ನ 2ಬ್ಯಾಗ್ ಪೈಪರ್ ವಿಸ್ಕಿ ಗಳನ್ನು

ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಅವುಗಳ ಮುಚ್ಚಳಕ್ಕೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗನ್ನು ಹಾಕಿ ಓ ಅಕ್ಷರದಿಂದ ಮೊಹರು ಮಾಡಲಾಯಿತು. ಪಂಚರ ಸಹಿ ಇರುವ ಚೀಟಿಗಳನ್ನು ಅದರ ಮೇಲೆ ಅಂಟಿಸಿ ಜಪ್ತು ಮಾಡಿರುತ್ತೇವೆ. ಸಾಕ್ಷಿಯು ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 1 ಎಂದು, ಸಹಿಯನ್ನು ನಿ ಪಿ 1 ಎ ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನಾನೇ ಟೈಪ್ ಮಾಡಿರುತ್ತೇನೆ. ಪಂಚನಾಮೆ ಕಾಲಕ್ಕೆ ಪೋಟೋಗಳನ್ನು ತೆಗೆದಿರುತ್ತೇವೆ. ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಬಾಟಲ್ ಗಳು ಮತ್ತು ಟೆಟ್ರಾ ಪ್ಯಾಕೇಟ್ ಗಳನ್ನು ಗುರುತಿಸಿದ್ದು ಅವುಗಳನ್ನು ಮು ಮಾ 1 ಎಂದು ಗುರುತಿಸಲಾಯಿತು. ನಾನು ಮೇಲಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ಅವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)***

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದ.**

90 ಎಂ ಎಲ್ ನ 10 ಒರಿಜಿನಲ್ ಚಾಯ್ಸ ಡಿಲೇಕ್ಸ ವಿಸ್ಕಿ, 90 ಎಂ ಎಲ್ ನ 3 ಓಲ್ಡ್ ಟವರಿಲ್ ವಿಸ್ಕಿ, 90 ಎಂ ಎಲ್ ನ 3 ಓಲ್ಡ್ ಅಡ್ಮಿರಲ್ ವಿಸ್ಕಿ ಮತ್ತು 180 ಎಂ ಎಲ್ ನ 2ಬ್ಯಾಗ್ ಪೈಪರ್ ವಿಸ್ಕಿ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ** ಈ ಈ ಡಿ **ವಕೀಲರಿಂದ**

ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಅದೇ ದಿನ ಚಾಸಾ 1 ರವರ ಬಳಿ ಹೇಳಿಕೆ ನೀಡಿರುತ್ತೇನೆ. ನಮ್ಮ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ರವರಿಗೆ ಬಾತ್ಮಿ ಬಂದಾಗ ನಾನು ಠಾಣೆಯಲ್ಲಿ ಇದ್ದೆ. ಚಾಸಾ 1 ರವರಿಗೆ ದೂರವಾಣಿ ಮೂಲಕ ಬಾತ್ಮಿ ಬಂದಿರುತ್ತದೆ. ಸಕಲೇಶಪುರದಿಂದ ಜಮ್ಮನ ಹಳ್ಳಿ 18-20 ಕಿಮೀ ಇರುತ್ತದೆ. ಬಾತ್ಮಿ ಬಂದ 10 ನಿಮಿಷ ಬಿಟ್ಟು ಠಾಣೆಯಿಂದ ಹೊರಟಿರುತ್ತೇವೆ. ನಾವು 3 ಜನ ಹೋಗಿರುತ್ತೇವೆ. ನಮ್ಮ ವಾಹನವನ್ನು ಆರೋಪಿ ಮನೆಯಿಂದ 10 ಮೀಟರ್

ದೂರದಲ್ಲಿ ನಿಲ್ಲಿಸಿದ್ದೇವು. ನಾವು ಹೋದಾಗ ಘಟನಾ ಸ್ಥಳದಲ್ಲಿ ಆರೋಪಿ ಮಾತ್ರ ಇದ್ದರು. ಆರೋಪಿ ಅಂಗಡಿಯ ಹೊರಗೆ ಮಧವನ್ನು ಇಟ್ಟಿಕೊಂಡಿದ್ದರು. ಅಂಗಡಿಗೆ ನಾಮಫಲಕ ಇರುವುದಿಲ್ಲ. ಮನೆ ಹಂಚಿನ ಮನೆಯಾಗಿತ್ತು. ಮನೆಯ ಸುತ್ತಮುತ್ತ ಕಾಂಪೌಂಡ ಇರಲಿಲ್ಲ. ಅವರ ಸುತ್ತಮುತ್ತ ಮನೆಗಳು ಇರಲಿಲ್ಲ. ಚಾಸಾ 1 ರವರು ಸಮವಸ್ತ್ರ ದಲ್ಲಿ ಇದ್ದರು. ಆರೋಪಿ ಓಡಿಹೋಗಲು ಪ್ರಯತ್ನ ಮಾಡಿರುವುದಿಲ್ಲ. ಅಂಗಡಿಯ ಹೊರಗೆ ಶೀಟ್ ಇತ್ತು. ಮಧ್ಯಗಳನ್ನು 2 ಪ್ಲಾಸ್ಟಿಕ್ ಬಿಳಿ ಬ್ಯಾಗ್ ಗಳಲ್ಲಿ ಇಟ್ಟಿಕೊಂಡಿದ್ದರು. ಬ್ಯಾಗ್ ಗೆ ಯಾವುದೇ ಕಂಪನಿ ಹೆಸರು ಇರಲಿಲ್ಲ. ಚಾಸಾ 1 ಮತ್ತು ಪಂಚರು ಮಧ್ಯವನ್ನು ಪರಿಶೀಲನೆ ಮಾಡಿರುತ್ತಾರೆ. ನಾನು ಅಲ್ಲೆ ಇದ್ದೆ. ಆರೋಪಿ ಮನೆಯ ಬಳಿ ಸಿ ಸಿ ಕ್ಯಾಮರ ಇರಲಿಲ್ಲ. ಮಧ್ಯಗಳನ್ನು ಚಾಸಾ 1 ರವರು ಪಂಚರ ಸಮಕ್ಷಮ ತೆಗೆದು ಪರಿಶೀಲನೆ ಮಾಡಿರುತ್ತಾರೆ.

ಆರೋಪಿ ಮನೆಯವರು ಯಾರು ಇರಲಿಲ್ಲ. ನಾವು ಸ್ಥಳಕ್ಕೆ 2.15 ಕ್ಕೆ ಹೋಗಿರುತ್ತೇವೆ. ಸುಮಾರು 1 ಗಂಟೆ 15 ನಿಮಿಷ ಇದ್ದೇವು. ಪಂಚನಾಮೆಯನ್ನು ನಾನೇ ಸ್ಥಳದಲ್ಲಿ ಟೈಪ್ ಮಾಡಿರುತ್ತೇನೆ. ಪಂಚರಿಗೆ ನೋಟೀಸ್ ಜಾರಿ ಮಾಡಿರುತ್ತೇವೆ. ಆಗ ಸಮಯ 2 ಗಂಟೆಯಾಗಿತ್ತು. ಅವರಿಗೆ ಸ್ಥಳದಲ್ಲಿ ನೋಟೀಸ ನೀಡಿ ಕರೆದುಕೊಂಡು ಹೋಗಿರುತ್ತೇವೆ. ಪಂಚರು ಬಸ್ ನಿಲ್ದಾಣದ ಬಳಿ ಇದ್ದರು. ಮೊದಲು ಬಂದಿಹಳ್ಳಿ ಆನಂತರ ಜಮ್ಮನ ಹಳ್ಳಿ ಇರುತ್ತದೆ. ಆರೋಪಿಯನ್ನು ಜಮ್ಮನಹಳ್ಳಿಯಲ್ಲಿ ನೋಡಿರುತ್ತೇನೆ. ಆರೋಪಿ ಊರು ಬಂದಿಹಳ್ಳಿ ಎಂದರೆ ಅಕ್ಕಪಕ್ಕ ಇದ್ದು ಒಂದೇ ಊರು ಆಗಿರುತ್ತದೆ. ಬಂದಿಹಳ್ಳಿಯಿಂದ 200-300 ಮೀಟರ್ ಅಂತರದಲ್ಲಿ ಜಮ್ಮನಹಳ್ಳಿ ಇರುತ್ತದೆ.

ಚಾಸಾ 1 ರವರು ಪಂಚರ ಮೂಲಕ ಹೇಳಿದ ಹಾಗೇ ಟೈಪ್ ಮಾಡಿರುತ್ತೇನೆ. ಪಂಚನಾಮೆ ಕಾಲಕ್ಕೆ ನಾವು ಪಂಚರು ಮತ್ತು ಆರೋಪಿ ಇದ್ದೇವು. ನಾವು ಯಾವುದೇ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಮು. ಮಾ.ವನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆಮಾಲಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿಅಂಶಗಳಿಗೋಸ್ಕರ ದಾಖಲು

ಮಾಡಿದ ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಟೋಗಳನ್ನು ಈ ಪ್ರಕರಣಕ್ಕಾಗಿ ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡಲಾಯಿತು.

**ಓ ಹೆ ಕೇ ಸ ಇ**

ಸಹಿ/-

**ಹೆಚ್ಚುವರಿ ಸಿವಿಲ್**

**ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ ಸಕಲೇಶಪುರ**